


# ಬೆರಗು ಹುಟ್ಟಿಸುವ ಬೇಸಿಗೆ ಅರಮನೆ!

ಬೇಸಿಗೆ ಅರಮನೆಗೆ ಆಧಾರವಾಗಿರುವ ಸಾಗುವಾನಿ ಮರದ ಕುಸುರಿ ಕೆತ್ತನೆಯ ಕಂಬಗಳು

■ ಚಿತ್ರ–ಬರಹ: **ಗಣಂಗೂರು ನಂಜೇಗೌಡ**

**ಟಿ**ಪ್ಪು ಸುಲ್ತಾನ್ ಶ್ರೀರಂಗಪಟ್ಟಣದಲ್ಲಿ ಎರಡು ಸುಂದರ ಅರಮನೆಗಳನ್ನು ನಿರ್ಮಿಸಿದ್ದ. ಆಡಳಿತ ನಡೆಸಲು 'ಲಾಲ್ ಮಹಲ್' ಮತ್ತು ಇದಕ್ಕೆ ಕೇವಲ ಎರಡು ಕಿ.ಮೀ. ದೂರದಲ್ಲಿ, ವಿಶ್ರಾಂತಿ ಪಡೆಯಲೆಂದು 'ದರಿಯಾ ದೌಲತ್' ಎಂಬ ಅರಮನೆಗಳನ್ನು ನಿರ್ಮಿಸಿದ್ದ. ಲಾಲ್ ಮಹಲ್ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ಸಂದರ್ಭದಲ್ಲಿ ಬ್ರಿಟಿಷರ ದಾಳಿಗೆ ಸಿಕ್ಕಿ ನುಚ್ಚು ನೂರಾಗಿದೆ. ಈಗ ಅದರ ಅವಶೇಷಗಳು ಮಾತ್ರ ಉಳಿದಿವೆ.

ಐತಿಹಾಸಿಕ ಕುರುಹುಗಳ ಕಣಜದಂತಿರುವ ಶ್ರೀರಂಗಪಟ್ಟಣದಲ್ಲಿ ಸದ್ಯ ಉಳಿದಿರುವ ಟಿಪ್ಪು ಸುಲ್ತಾನನ ಬೇಸಿಗೆ ಅರಮನೆಯನ್ನು 'ದರಿಯಾ ದೌಲತ್' ಎಂಬ ಹೆಸರಿನಿಂದ ಕರೆಯಲಾಗುತ್ತದೆ. 2ನೇ ಆಂಗ್ಲೋ– ಮೈಸೂರು ಯುದ್ಧದಲ್ಲಿ ಪಡೆದ ಗೆಲುವಿನ ನೆನಪಿಗಾಗಿ 1784ರಲ್ಲಿ ಟಿಪ್ಪು ಈ ಆಕರ್ಷಕ ಅರಮನೆಯನ್ನು ನಿರ್ಮಿಸಿದ್ದಾನೆ. ಸುಮಾರು ಮೂರು ಅಡಿ ಎತ್ತರದ ಚಚ್ಚೌಕಾಕಾರದ ಜಗತಿಯ ಮೇಲೆ ಈ ಅರಮನೆಯನ್ನು ನಿರ್ಮಿಸಲಾಗಿದೆ. ಇದರ ತಳಪಾಯ ಕಂದು ಮಿಶ್ರಿತ ಕಲ್ಲುಗಳಿಂದ ನಿರ್ಮಾಣಗೊಂಡಿದೆ. ಮೇಲ್ಭಾಗ ಭಾಗಶಃ ಗೋಡೆ ಮತ್ತು ಬಹುಪಾಲು ಮರ ಮುಟ್ಟುಗಳಿಂದ ನಿರ್ಮಾಣವಾಗಿದೆ. ಈ ಎರಡು ಅಂತಸ್ತಿನ ಅರಮನೆಯಲ್ಲಿ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ 40 ಅಡಿ ಎತ್ತರದ ಹಾಗೂ ದಪ್ಪ ಗಾತ್ರದ ಗೋಡೆಗಳಿವೆ. ಸುಟ್ಟ ಇಟ್ಟಿಗೆ ಮತ್ತು ಚುರುಕಿ ಗಾರೆ ಬಳಸಿ ಗೋಡೆಗಳನ್ನು ಕಟ್ಟಲಾಗಿದೆ.

**ಪೂರ್ವ ಗೋಡೆ:** ಈ ಬೇಸಿಗೆ ಅರಮನೆಯ ಪ್ರತಿ ಗೋಡೆಯೂ ಒಂದೊಂದು ಕತೆ ಹೇಳುತ್ತವೆ. ಪೂರ್ವ ಭಿತ್ತಿಯ ಮೇಲೆ ಟಿಪ್ಪು ಸುಲ್ತಾನ್ ಸಮಕಾಲೀನರಾದ ಮುಮ್ಮಡಿ ಕೃಷ್ಣರಾಜ ಒಡೆಯರ್, 2ನೇ ಬಾಲಾಜಿರಾವ್ ಪೇಶ್ವೆ, 5ನೇ ಕೆಂಪೇಗೌಡ, ಚಿತ್ರದುರ್ಗದ ಮದಕರಿ ನಾಯಕ, ತಂಜಾವೂರಿನ ರಾಜ, ಚಿತ್ತೂರಿನ ರಾಣಿ ಮೊದಲಾದವರನ್ನು ಒಳಗೊಂಡ ದರ್ಬಾರ್ ಸನ್ನಿವೇಶಗಳು ಗಮನ ಸೆಳೆಯುತ್ತವೆ. ಸಾಮಂತ ರಾಜರ ಜತೆಗಿನ ಒಪ್ಪಂದಗಳು, ವಿವಿಧ ಪ್ರಾಂತ್ಯಗಳ ರಾಜಪ್ರತಿನಿಧಿಗಳು, ಅವರಿಗೆ ಸ್ವಾಗತ ಕೋರುವ ದೃಶ್ಯಗಳು ನೈಸರ್ಗಿಕ ಬಣ್ಣದಿಂದ ಚಿತ್ರಿತವಾಗಿವೆ. ಬಿಳಿ, ಹಸಿರು, ಕೆಂಪು ಇತರ